ಹುಕ್ಕೇರಿ ತಾಲ್ಲೂಕಿನಲ್ಲಿ ಆಶ್ರಯ ಮನೆಗಳ ಹಂಚಿಕೆ

563 - ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1999-2000ನೇ ಸಾಲಿನಲ್ಲಿ ಹುಕ್ಕೇರಿ ತಾಲ್ಲೂಕಿಗೆ ಎಷ್ಟು ಆಶ್ರಯ ಮನೆಗಳನ್ನು ಸರ್ಕಾರದಿಂದ ಮಂಜೂರು ಮಾಡಲಾಗಿದೆ?*

ಆ) *ಸರ್ಕಾರದಿಂದ ಇವುಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? (ತಾಲ್ಲೂಕುವಾರು ವಿವರಗಳನ್ನು ನೀಡುವುದು)*

ಇ) *ಕ್ಷೇತ್ರಗಳಿಗೆ ಯಾವ ಆಧಾರದ ಮೇಲೆ ಈ ಮನೆಗಳನ್ನು ಮಂಜೂರು ಮಾಡಲಾಗುತ್ತಿದೆಯೆ?*

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ನಗರ ಆಶ್ರಯ — ಗ್ರಾಮೀಣ ಆಶ್ರಯ

112 ಮನೆಗಳು — 800 ಮನೆಗಳು

(1998-99 1 ಲಕ್ಷ ಮನೆಗಳ ಗುರಿ)

ಆ) 1. 1999-2000ನೇ ಸಾಲಿಗೆ ನಗರ ಆಶ್ರಯ ಯೋಜನೆಯಡಿ ರೂ. 28.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

2. ಗ್ರಾಮೀಣ ಪ್ರದೇಶದಲ್ಲಿ 1998-99ನೇ ಸಾಲಿಗೆ ನೀಡಿದ 1 ಲಕ್ಷ ಮನೆಗಳ ಹೆಚ್ಚುವರಿ ಗುರಿಯನ್ನು 99-2000ನೇ ಸಾಲಿಗೆಂದು ಪರಿಗಣಿಸಲಾಗಿದೆ. ಬೆಳಗಾಂ ಜಿಲ್ಲೆಗೆ ಸರ್ಕಾರವು 5900 ಮನೆಗಳ ಗುರಿಯನ್ನು ನೀಡಿದ್ದು ಈ ಕೆಳಕಂಡಂತೆ ತಾಲ್ಲೂಕುವಾರು ಹಣಕಾಸನ್ನು ಬಿಡುಗಡೆ ಮಾಡಲಾಗಿದೆ.

ಕ್ರಮ ಸಂಖ್ಯೆ	ತಾಲ್ಲೂಕು	ಬಿಡುಗಡೆ ಮಾಡಿದ ಹಣ *(ರೂ. ಲಕ್ಷಗಳಲ್ಲಿ)*
1.	ಅಥಣಿ	16.720
2.	ರಾಯಬಾಗ	10.423
3.	ಚಿಕ್ಕೋಡಿ	111.999
4.	ಬೈಲಹೊಂಗಲ	37.234
5.	ಬೆಳಗಾವಿ	53.987
6.	ಗೋಕಾಕ	43.404

ಕ್ರಮ ಸಂಖ್ಯೆ	ತಾಲ್ಲೂಕು	ಬಿಡುಗಡೆ ಮಾಡಿದ ಹಣ (ರೂ. ಲಕ್ಷಗಳಲ್ಲಿ)
7.	ಸವದತ್ತಿ	52.630
8.	ಹುಕ್ಕೇರಿ	75.352
9.	ಖಾನಾಪುರ	30.210
10.	ರಾಮದುರ್ಗ	16.644
	ಒಟ್ಟು	**448.603**

ಇ) 1998-99ನೇ ಸಾಲಿನಲ್ಲಿ (1ಲಕ್ಷ ಮನೆಗಳ ಗುರಿ) ಜನಸಂಖ್ಯಾ ಆಧಾರದ ಮತ್ತು ಬೇಡಿಕೆಗೆ ಅನುಗುಣವಾಗಿ ಮನೆಗಳನ್ನು ಮಂಜೂರು ಮಾಡಲಾಗಿದೆ.

ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ತಾಲ್ಲೂಕುವಾರು ಇನ್ನೂ ಎಷ್ಟು ಹಣ ಬಿಡುಗಡೆ ಮಾಡಬೇಕು ಎಂಬ ಬಗ್ಗೆ ಹೇಳಿಲ್ಲ. ಹುಕ್ಕೇರಿ ತಾಲ್ಲೂಕಿನಲ್ಲಿ 75 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ನನಗೆ ಬಂದ ಮಾಹಿತಿಯಂತೆ ಈ ಅಧಿವೇಶನ ನಡೆಯುವ 15 ದಿನಗಳ ಮುಂಚಿನವರೆಗೆ ಒಂದು ಪೈಸೆ ಕೂಡ ಬಿಡುಗಡೆ ಆಗಿರಲಿಲ್ಲ. ಇದೂ ಅಲ್ಲದೇ ಕಳೆದ ಒಂದು ವರ್ಷದಿಂದ ಇನ್ನೂ 50 ಲಕ್ಷ ರೂಪಾಯಿಗಳು ಆಶ್ರಯ ಮನೆಯ ಸಲುವಾಗಿ ಬಾಕಿ ಬಾರದೇ ಹಾಗೇ ಉಳಿದಿದೆ. ಇವತ್ತು ಮನೆ ಕಟ್ಟುವ ಕೆಲಸ ಅರ್ಧಕ್ಕೇ ನಿಂತಿದೆ. ಮಳೆಗಾಲದಲ್ಲಿ ಮಳೆ ಬಂದು ಕೆಲಸ ನಿಂತಿದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಹಣವನ್ನು ಏಕೆ ಬಿಡುಗಡೆ ಮಾಡಿಲ್ಲ? ಎಂಬ ಬಗ್ಗೆ ದಯವಿಟ್ಟು ಮಾನ್ಯ ಸಚಿವರು ಹೇಳಬೇಕು.

ಶ್ರೀ ಖಮರುಲ್ ಇಸ್ಲಾಂ : ಮಾನ್ಯ ಅಧ್ಯಕ್ಷರೇ, 1998-99ರಲ್ಲಿ ಮೂರು ಸೀರೀಸ್ ರೀಲೀಸ್ ಆಗಿದೆ. ಮೊದಲನೆಯದು, 40 ಸಾವಿರ ಸೀರೀಸ್, ಇನ್ನೊಂದು ಅಡಿಷನಲ್ 1 ಲಕ್ಷ ಸೀರೀಸ್ ಮತ್ತೊಂದು 30 ಸಾವಿರ ಸೀರೀಸ್. 40 ಸಾವಿರ ಸೀರೀಸ್‌ಗೆ ಬಜೆಟ್‌ನಲ್ಲಿ ಪ್ರಾವಿಷನ್ ಇಟ್ಟಿದ್ದೇವೆ. 1998-99ರಲ್ಲಿ ಅಡಿಷನಲ್ ಸೀರೀಸ್‌ಗೆ ಬಜೆಟ್ ಪ್ರಾವಿಜನ್ ಮಾಡಿಲ್ಲ. ಕಳೆದ ನಾಲ್ಕು ತಿಂಗಳಿನಲ್ಲಿ 1999-2000ಕ್ಕೆ ರೂರಲ್ ಸೀರೀಸ್‌ಗೆ ಹಣ ಬಿಡುಗಡೆ ಮಾಡಿಲ್ಲ. ಏಕೆಂದರೆ ನಮಲ್ಲಿರುವ 42.78 ಲಕ್ಷ ರೂಪಾಯಿಗಳ ಹಣ ಏನಿದೆ, ಆ ಹಣವನ್ನು ಅಡಿಷನಲ್ ಸೀರೀಸ್‌ಗೆ ಉಪಯೋಗಿಸಿದ್ದೇನೆ. ಒಟ್ಟಾರೆಯಾಗಿ ಬೆಳಗಾಂ ಜಿಲ್ಲೆಯಲ್ಲಿ ಸುಮಾರು 1.40 ಲಕ್ಷ ಹಣವನ್ನು ರಿಲೀಸ್ ಮಾಡಲಾಗಿದೆ. ಇನ್ನು ಸುಮಾರು 1 ಕೋಟಿ ರೂಪಾಯಿಗಳ ಹಣ ರಿಲೀಸ್ ಮಾಡಬೇಕಾಗಿದೆ. To release that amount, we have utilised this 42.78 lakhs, because for 1999-2000, only urban series was released and for that money was released. 2000-2001ನೇ ಸಾಲಿಗೆ 1 ಲಕ್ಷ

30 ಸಾವಿರ ರೂಪಾಯಿಗಳ ಹಣ ರಿಲೀಸ್ ಆಗಿದೆ. ಅರ್ಬನ್ ಸೀರೀಸ್ ಹಣ ಏನಿದೆ ಅದೆಲ್ಲಾ ಇನ್ನೂ ಹಾಗೇ ಇದೆ. ಅಡಿಷನಲ್ ಸೀರೀಸ್‌ಗೆ ತಮ್ಮ ಕಾಲದಲ್ಲಿ ಏನೂ ಪ್ರಾವಿಷನ್ ಮಾಡಿರಲಿಲ್ಲ. ಆದ್ದರಿಂದ ನಾನೂ ರಿಲೀಸ್ ಮಾಡಿಲ್ಲ. We are utilising that money. We have got the physical report now. completed houses are 20,778. under-progress 19,778 houses unstarted, not selected 59,444 houses, total one lakh. ಇದು ನಮ್ಮ ಜವಾಬ್ದಾರಿಯಾಗಿದೆ. ಅಂಡರ್ ಪ್ರೊಗ್ರೆಸ್‌ನಲ್ಲಿ ಯಾವ್ಯಾವ ಮನೆಗಳಿವೆಯೋ ಅದಕ್ಕೆ ಹಣ ಪ್ರಾವಿಷನ್ ಮಾಡುವುದು ನಮ್ಮ ಸರ್ಕಾರದ ಕರ್ತವ್ಯವಾಗಿದೆ. ಅದನ್ನು ನಾವು ಕಂಪ್ಲೀಟ್ ಮಾಡುತ್ತೇವೆ.

ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ್ : ಮಾನ್ಯ ಮಂತ್ರಿಗಳು ಇದನ್ನು ಹಿಂದಿನ ಸರ್ಕಾರ ಕೊಟ್ಟಿದ್ದು ಎಂದು ಹೇಳುತ್ತಿದ್ದಾರೆ. ಈಗಾಗಲೇ ಒಂದು ವರ್ಷವಾಗಿದೆ. ಕೇವಲ ಅರ್ಧ ಮನೆಗಳನ್ನು ಮಾತ್ರ ಕಟ್ಟಿಕೊಳ್ಳಲಾಗಿದೆ. ಇವತ್ತು ಅವುಗಳೂ ಕೂಡ ಮಳೆಗಾಲದಲ್ಲಿ ಬಿದ್ದು ಹೋಗುತ್ತಿವೆ. ಯಾವುದೇ ಸರ್ಕಾರ ಇದ್ದರೂ ಹಣ ಬಿಡುಗಡೆ ಮಾಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಹಣ ಕೊಡಬೇಕಾದುದು ನಿಮ್ಮ ಕರ್ತವ್ಯ. ಈಗಾಗಲೇ ಒಂದು ವರ್ಷವಾದರೂ ಇನ್ನೂ ಪಾರ್ಟ್ ಪೇಮೆಂಟ್ ಮಾಡುತ್ತಿದ್ದೀರಿ. ನಿಮ್ಮ ಲೆಕ್ಕಾಚಾರದ ಪ್ರಕಾರವೇ ಇನ್ನೂ ಅರ್ಧ ಹಣ ಬಿಡುಗಡೆ ಮಾಡಬೇಕಾಗಿದೆ. ಅದನ್ನು ನೀವು ಬೇಗನೇ ಬಿಡುಗಡೆ ಮಾಡಿ. ಇದರಿಂದ ಬಡವರು ಅಲ್ಲಿ ಮನೆ ಕಟ್ಟಿ ವಾಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇನ್ನೊಂದು ಪ್ರಶ್ನೆಯನ್ನೂ ಕೂಡ ನಾನು ಇವತ್ತು ವಸತಿ ಸಚಿವರನ್ನು ಕೇಳುತ್ತಿದ್ದೇನೆ. ಆಶ್ರಯ ಸಮಿತಿಗಳಿಗೆ ಶಾಸಕರೇ ಅಧ್ಯಕ್ಷರಾಗಿದ್ದಾರೆ. ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು ಮತ್ತು ಅಧಿಕಾರಿಗಳು ಅದರ ಸದಸ್ಯರಾಗಿರುತ್ತಾರೆ. ಅವರು ಕೆಲವೊಂದು ಲಿಸ್ಟ್‌ಗಳನ್ನು ಮಾಡಿದ್ದರು. ಆಶ್ರಯ ಸಮಿತಿ ಅದರಂತೆ ಮನೆ ಡಿಸ್ಟ್ರಿಬ್ಯೂಟ್ ಕೂಡ ಮಾಡಿದೆ ಆದರೆ ಹೊಸ ಕಮಿಟಿ ಮೆಂಬರ್ಸ್ ಬಂದ ಮೇಲೆ ಸರ್ಕಾರದಿಂದ, ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪಂಚಾಯತ್‌ಗೆ ಪತ್ರ ಬರೆದು ಅವನ್ನೆಲ್ಲಾ ಕ್ಯಾನ್ಸಲ್ ಮಾಡುತ್ತಿದ್ದಾರೆ. ಇದರ ಅರ್ಥವೇನು? ಆ ಕಮಿಟಿ ಅಸ್ತಿತ್ವದಲ್ಲಿ ಇತ್ತೋ ಇಲ್ಲವೋ? ಅವರು ಇಲ್ಲಿ ಕೇವಲ ಸದಸ್ಯರು ಅಷ್ಟೇ. ಮೊದಲು ಕಮಿಟಿ ಅಸ್ತಿತ್ವದಲ್ಲಿತ್ತು. ಅದನ್ನು ಬದಲಾವಣೆ ಮಾಡಿ ಹೊಸ ಲಿಸ್ಟ್ ಅನ್ನು ತೆಗೆದುಕೊಳ್ಳಬೇಕೆಂದು ವರ್ಕ್ ಔಟ್ ಮಾಡಿದ್ದಾರೆ. ಇದಕ್ಕೆ ಸರ್ಕಾರ ಏನು ಉತ್ತರ ಕೊಡುತ್ತದೆ?

ಶ್ರೀ ಖಮರುಲ್ ಇಸ್ಲಾಂ : ಮಾನ್ಯ ಅಧ್ಯಕ್ಷರೇ, We have re-constituted all the Committees constitutency-wise. Earlier Committees are not existing now, because those committees were talukwise committees. ಈಗ ಕ್ಷೇತ್ರವಾರು ಸಮಿತಿ ಮಾಡಿದ್ದೇವೆ. ಯಾವ ಕ್ಷೇತ್ರ ಗ್ರಾಮೀಣ ಮತ್ತು ನಗರ ಎರಡೂ ಭಾಗದಲ್ಲಿ ಬರುತ್ತದೆಯೋ ಅಂತಹ ಕಡೆ ಪ್ರತ್ಯೇಕವಾಗಿ ಗ್ರಾಮೀಣ ಮತ್ತು ನಗರ ಸಮಿತಿಗಳನ್ನು ಮಾಡಿದ್ದೇವೆ.

ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನೇನು ಹೇಳುತ್ತೇನೆ ಎಂದರೆ, ಕಮಿಟಿ ರದ್ದು ಆಗುವುದಿಲ್ಲ. ನೀವು ಸದಸ್ಯರನ್ನು ಮಾತ್ರ ಪುನರ್ ನೇಮಕ ಮಾಡಿದಿರಿ ಅಷ್ಟೇ. ಆದರೆ ಕಮಿಟಿ ಅಸ್ತಿತ್ವದಲ್ಲಿ ಇದ್ದೇ ಇರುತ್ತದೆ. ಅದು ಎಂದಿಗೂ ರದ್ದಾಗುವುದಿಲ್ಲ. ಆ ಸಮಿತಿಯಲ್ಲಿ

ಅಧಿಕಾರಿಗಳು ಮತ್ತು ಶಾಸಕರು ಇರುತ್ತಾರೆ. ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು ಆ ಸಮಿತಿಯ ಉಪಾಧ್ಯಕ್ಷರಾಗಿರುತ್ತಾರೆ. ಹೀಗಿರುವಾಗ ಆ ಕಮಿಟಿ ಹೇಗೆ ರದ್ದಾಗುತ್ತದೆ? ಕಮಿಟಿ ಇದ್ದಾಗ ಅವರು ಕೆಲವು ಮನೆಗಳನ್ನು ಹಂಚಿಕೆ ಮಾಡಿದ್ದಾರೆ. ಅದನ್ನು ಇವತ್ತು ಕ್ಯಾನ್ಸಲ್ ಮಾಡುತ್ತಿದ್ದಾರೆ.

ಶ್ರೀ ಖಮರುಲ್ ಇಸ್ಲಾಂ : ಆಶ್ರಯ ಸಮಿತಿಯ ಅಧ್ಯಕ್ಷರು ಶಾಸಕರಾಗಿದ್ದಾರೆ. ಅದರ ಜೊತೆಗೆ ಅಧಿಕಾರೇತರ ಸದಸ್ಯರೂ ಕೂಡ ಇರುತ್ತಾರೆ. ಅದೇ ಪ್ರಕಾರ ನಾವು ಈಗ ಮಾಡಿದ್ದೇವೆ. ಛೇರ್ಮನ್ ಜಿಲ್ಲಾ ಪರಿಷತ್ತಿನಲ್ಲಿ ಪಾಸ್ ಮಾಡುವುದಕ್ಕೆ ಏನೂ ಪ್ರಾವಿಷನ್ ಇಲ್ಲ. ಕಮಿಟಿ ಏನು ನಿರ್ಣಯ ತೆಗೆದುಕೊಂಡಿದೆ ಆ ಲಿಸ್ಟ್ ಫೈನಲ್ ಅದೇ ನೋಟಿಫಿಕೇಷನ್.

ಒಬ್ಬ ಮಾನ್ಯ ಸದಸ್ಯರು : ಬರೀ ಕೋಲಾರದವರೇ ಮಾತನಾಡಿದರೆ ಹೇಗೆ?

MR. SPEAKER : Please don't say such words unnecessarily. I am very sorry.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಮಂತ್ರಿಗಳು ಹಣ ರಿಲೀಸ್ ಮಾಡಿ ಆಶ್ರಯ ಮನೆಗಳನ್ನು ಮುಗಿಸುತ್ತೀರೋ ಹೇಗೆ? ಕೊಪ್ಪಳ ಜಿಲ್ಲೆಯಲ್ಲಿ ಒಂದು ಸಾವಿರ ಮನೆಗಳು ನಿಂತಿವೆ, ಅದಕ್ಕೆ ಒಂದು ಪೈಸೆ ಕೂಡ ಕೊಟ್ಟಿಲ್ಲ. ಹಿಂದೆ ಜನತಾದಳದವರು ಮಾಡಿದ್ದರೆ ಆ ಮನೆಗಳನ್ನು ಮುಗಿಸಬಾರದು ಎಂದು ಇದೆಯಾ?

ಶ್ರೀ ಖಮರಲ್ ಇಸ್ಲಾಂ : 1978 ಮನೆಗಳು ಪ್ರೋಗ್ರೆಸ್‌ನಲ್ಲಿವೆ. ಅವುಗಳನ್ನು ಕಂಪ್ಲೀಟ್ ಮಾಡುವುದಕ್ಕೆ ಹಣ ರಿಲೀಸ್ ಮಾಡುತ್ತಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕ್ಷೇತ್ರಗಳಿಗೆ ಯಾವ ಆಧಾರದ ಮೇಲೆ ಮನೆಗಳನ್ನು ಮಂಜೂರು ಮಾಡಲಾಗುತ್ತದೆ ಎಂದು ಕೇಳಿದ್ದಾರೆ. ಜನಸಂಖ್ಯೆ ಆಧಾರದ ಮೇಲೆ ಮನೆಗಳನ್ನು ಮಂಜೂರು ಮಾಡಲಾಗುತ್ತದೆ ಎಂದು ಹೇಳಿದ್ದೀರಿ. ಕೆಲವು ಕಡೆ ವಿಧಾನಸಭಾವಾರು ಕಮಿಟಿ ಮಾಡಿ, ವಿಧಾನಸಭಾ ಕ್ಷೇತ್ರವಾರು ಮನೆಗಳನ್ನು ಹಂಚುವುದಕ್ಕೆ ಪ್ರಾರಂಭ ಮಾಡಿದರೂ ಅಲ್ಲಿ ಜನಸಂಖ್ಯೆ ತೋರಿಸಿಲ್ಲ. ಉದಾಹರಣೆಗೆ ನಮ್ಮ ಜಿಲ್ಲೆಯ ಮುಂಡರಗಿಯಲ್ಲಿ 470 ಮನೆಗಳು ಹಾಗೂ ಗದಗ್‌ನಲ್ಲಿ 470 ಮನೆಗಳನ್ನು ಕೊಟ್ಟಿದ್ದಾರೆ. ಗದಗ್‌ನಲ್ಲಿ 65,000 ಜನಸಂಖ್ಯೆ ಇದೆ, ಮುಂಡರಗಿಯಲ್ಲಿ ಒಂದು ಲಕ್ಷದ 48 ಸಾವಿರ ಜನಸಂಖ್ಯೆ ಇದೆ, ಅಲ್ಲಿ 470 ಮನೆಗಳಿವೆ, ಇಲ್ಲಿಯೂ 470 ಮನೆಗಳಿವೆ, ಇದನ್ನು ಸರಿಪಡಿಸುತ್ತೀರಾ? ಎರಡನೆಯದಾಗಿ ಮುಂಡರಗಿ ತಾಲ್ಲೂಕಿನಲ್ಲಿ ಕೂಡ 38,823 ಎಸ್‌ಸಿ:ಎಸ್‌ಟಿ ಜನಸಂಖ್ಯೆ ಇದೆ. ಅಲ್ಲಿ 51 ಮನೆಗಳನ್ನು ಕೊಟ್ಟಿದ್ದಾರೆ. ಗದಗ್ ಮತ ಕ್ಷೇತ್ರದಲ್ಲಿ 10,214 ಜನಸಂಖ್ಯೆ ಇದ್ದರೆ 64 ಮನೆಗಳನ್ನು ಕೊಟ್ಟಿದ್ದಾರೆ. ಈ ರೀತಿ ಮನೆ ಹಂಚುವಿಕೆಯಲ್ಲಿ ಅನ್ಯಾಯವಾಗಿದೆ ಇದನ್ನು ಸರಿಪಡಿಸುತ್ತೀರಾ?

ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಅಧ್ಯಕ್ಷರೆ, ಜಿಲ್ಲಾ ಜನಸಂಖ್ಯೆ ಆಧಾರದ ಮೇಲೆ ಡಿವೈಡ್ ಮಾಡಿ ಕ್ಷೇತ್ರದ ಜನಸಂಖ್ಯೆಗೆ ಅನುಗುಣವಾಗಿ ಮನೆಗಳನ್ನು ಕೊಟ್ಟಿಲ್ಲ. ನಮಗೂ ಅನ್ಯಾಯವಾಗಿದೆ.

ಐದು ಗ್ರಾಮ ಪಂಚಾಯಿತಿಗಳಲ್ಲಿ ಆಶ್ರಯಮನೆಗಳು ಬರತಕ್ಕಂಥದ್ದು. ಹಳ್ಳಿಗಳಲ್ಲಿ ಅವರು ಏನು ಮಾಡಿದ್ದಾರೆಂದರೆ, ನಗರ ಪ್ರದೇಶ ಸೇರಿಸಿಕೊಂಡಿರತಕ್ಕಂತಹ ಐದು ಗ್ರಾಮ ಪಂಚಾಯಿತಿ ಇದ್ದರೆ, ಅವರಿಗೆ 800 ಮನೆ ಕೊಟ್ಟಿದ್ದಾರೆ. ನಮಗೆ 50 ಗ್ರಾಮ ಪಂಚಾಯಿತಿ ಇದ್ದರೆ 500 ಮನೆ ಕೊಡುತ್ತಾರೆ. ಐದು ಗ್ರಾಮ ಪಂಚಾಯಿತಿ ಇದ್ದವರಿಗೆ ಹೆಚ್ಚಿನ ಮನೆಗಳು ಹೋಗುತ್ತವೆ. ಆಗ ನಗರ ಪ್ರದೇಶದ ಆಶ್ರಯ ಮನೆಗಳೂ ಸಹ ಅವರಿಗೆ ಬರುತ್ತವೆ. ಐದು ಗ್ರಾಮ ಪಂಚಾಯಿತಿಗಳಿಗೆ 100 ಮನೆಗಳನ್ನು ಹಂಚುತ್ತಾರೆ. 50 ಗ್ರಾಮ ಪಂಚಾಯಿತಿಗಳಿಗೆ ಎರಡೆರಡು ಮನೆ ಹಂಚುವುದಕ್ಕಾಗುವುದಿಲ್ಲ. ಚನ್ನಗಿರಿ ತಾಲ್ಲೂಕಿನಲ್ಲಿ ಎರಡು ಲಕ್ಷದ 45,000 ಜನಸಂಖ್ಯೆ ಇದೆ. 8 ಲಕ್ಷದ 65,000 ಜನಸಂಖ್ಯೆ ಇರುವವರಿಗೆ 740 ಮನೆಗಳನ್ನು ಕೊಟ್ಟಿದ್ದಾರೆ. ಎರಡು ಲಕ್ಷ 50 ಮನೆಗಳಿರುವವರಿಗೂ ಆಶ್ರಯ ಮನೆಗಳನ್ನು ಕೊಟ್ಟಿದ್ದಾರೆ.

ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಬಾಗಲಕೋಟೆಯಲ್ಲಿ ಕೂಡ 600 ಮನೆಗಳನ್ನು ಕೊಟ್ಟಿದ್ದಾರೆ. ಗ್ರಾಮಾಂತರ ಪ್ರದೇಶ ಮತ್ತು ನಗರ ಪ್ರದೇಶಗಳಲ್ಲಿರತಕ್ಕಂತಹವರಿಗೆ ಕೂಡ 600 ಮನೆಗಳನ್ನು ಕೊಟ್ಟಿದ್ದಾರೆ. ನಿಮ್ಮ ತಾಲ್ಲೂಕಿನಲ್ಲಿಯೂ ಕೂಡ 800 ರಿಂದ 900 ಮನೆಗಳನ್ನು ಕೊಟ್ಟಿದ್ದಾರೆ. ಈ ತಾರತಮ್ಯ ನಿವಾರಿಸುವುದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಿ. ಕ್ಷೇತ್ರವಾರು ಕೊಡುತ್ತಿದ್ದಾರೆ, ತಾಲ್ಲೂಕುವಾರು ಕೊಡುತ್ತಿದ್ದಾರೆ, ಜನಸಂಖ್ಯೆ ಆಧಾರದ ಮೇಲೆ ಕೊಡುತ್ತಿದ್ದಾರೆ ಯಾವುದಕ್ಕೂ ಗೊತ್ತುಗುರಿ ಕಾಣುತ್ತಿಲ್ಲ. ದಯಮಾಡಿ ನನಗೆ ಇದರ ಬಗ್ಗೆ ವಿವರಣೆ ನೀಡಬೇಕು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) : ಮಾನ್ಯ ಸಭಾಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಗೆ 3537 ಮನೆಗಳನ್ನು ಕೊಟ್ಟರು. ಇಲ್ಲಿಯೂ ಆರು ವಿಧಾನಸಭಾಕ್ಷೇತ್ರ ಇದೆ. ಶೃಂಗೇರಿ ಕ್ಷೇತ್ರ ಒಂದಕ್ಕೆ 1515 ಮನೆಗಳನ್ನು ಕೊಟ್ಟಿದ್ದಾರೆ. ಬೀರೂರು ಕ್ಷೇತ್ರಕ್ಕೆ 334 ಮನೆ ಮಾತ್ರ ಕೊಟ್ಟಿದ್ದಾರೆ. ಕಡೂರು ಕ್ಷೇತ್ರಕ್ಕೆ 355 ಮನೆ ಕೊಟ್ಟಿದ್ದಾರೆ. ಮನೆಗಳನ್ನು ಹಂಚುವುದು ಕ್ಷೇತ್ರಗಳ ಜನಸಂಖ್ಯೆ ಆಧಾರದ ಮೇಲೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಶೃಂಗೇರಿ ತಾಲ್ಲೂಕಿನಲ್ಲಿ ಆರು ಗ್ರಾಮಪಂಚಾಯಿತಿಗಳಿವೆ, ಆರು ಗ್ರಾಮ ಪಂಚಾಯಿತಿಗಳಿಗೆ 505 ಮನೆ ಕೊಟ್ಟಿದ್ದಾರೆ. ನಮ್ಮದು 37 ಗ್ರಾಮಪಂಚಾಯಿತಿಗಳಿವೆ, ಇದಕ್ಕೆ 334 ಮನೆ ಕೊಟ್ಟಿದ್ದಾರೆ. ಇದು ಯಾವ ನ್ಯಾಯ? ಇದನ್ನು ಸರಿಪಡಿಸಬೇಕೆಂದು ಹೇಳುತ್ತಿದ್ದೇನೆ. 15ನೇ ತಾರೀಖಿನ ಒಳಗೆ ಆಶ್ರಯ ಮನೆಗಳ ಪಟ್ಟಿ ಕೊಡಬೇಕೆಂದು ಆದೇಶ ಬರುತ್ತಿದೆ, ಇದನ್ನು ಸರಿಪಡಿಸಿ ಕೊಡದೆ ಹೋದರೆ, ನಾವು ಆಶ್ರಯ ಮನೆಗಳ ಪಟ್ಟಿ ಮಾಡಿಕೊಡುವುದಕ್ಕೆ ಅನಾನುಕೂಲವಾಗುತ್ತದೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ನಮ್ಮ ಗಮನಕ್ಕೆ ಬಂದ ಹಾಗೆ ಜನಸಂಖ್ಯೆ ಆಧಾರದ ಮೇಲೆ ಆಶ್ರಯ ಮನೆಗಳನ್ನು ವಿತರಣೆ ಮಾಡುತ್ತೇವೆಂದು ಒಂದು ಕಡೆ ಹೇಳಿದ್ದೀರಿ. ಇನ್ನೊಂದು ಕಡೆ ಜನಸಂಖ್ಯೆ ಆಧಾರದ ಮೇಲೆ ವಿತರಣೆಯಾಗಿರುವುದರಿಂದ ತಾರತಮ್ಯವಾಗಿದೆ ಎಂದು ಸದಸ್ಯರಿಂದ ದೂರು ಬಂದಿರುವುದು ತಮಗೂ ಮನವರಿಕೆಯಾಗಿದೆ. ಇನ್ನೊಂದು ಕಡೆ ಏನು ಹೇಳಿದ್ದೀರಿ, ವಿಧಾನ ಸಭೆ ಅಧಿವೇಶನ ನಡೆಯುತ್ತಿದೆ, 30ನೇ ತಾರೀಖಿನ ಒಳಗೆ ಎಲ್ಲ ಫಲಾನುಭವಿಗಳನ್ನು ಗುರುತಿಸಿ ಅಂತ್ಯ ಮಾಡತಕ್ಕಂತಹ ನಿರ್ದೇಶನಗಳನ್ನು ಕೊಟ್ಟಿದ್ದೀರಿ. ವಿಧಾನಸಭೆ ನಡೆಯುತ್ತಿದ್ದು ನಾವು

ಇಲ್ಲಿರುವಾಗ ಯಾವ ಸಭೆ ಮಾಡುವುದಕ್ಕಾಗುತ್ತದೆ? ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಒಂದೊಂದು ಗ್ರಾಮ ಪಂಚಾಯಿತಿಗೆ, ಒಂದೊಂದು ಕ್ಷೇತ್ರಕ್ಕೆ ಇಷ್ಟು ಎಂದು ಹಂಚುವುದರ ಬದಲಾಗಿ ಗ್ರಾಮ ಪಂಚಾಯಿತಿ ಮಟ್ಟಕ್ಕೆ ಇಷ್ಟು ಮನೆಗಳು ಎಂದು ಹೇಳಿದರೆ ಅನುಕೂಲವಾಗುತ್ತದೆ. ಗ್ರಾಮ ಪಂಚಾಯಿತಿಗಳು ಯಾವ ಕ್ಷೇತ್ರದಲ್ಲಾದರೂ ಇರಲಿ, ಜನಸಂಖ್ಯೆ ಆಧಾರದ ಮೇಲೆ ಗ್ರಾಮ ಪಂಚಾಯಿತಿ ಕ್ಷೇತ್ರವಾರು ವಿತರಣೆ ಮಾಡಿದರೆ ಅನುಕೂಲವಾಗುತ್ತದೆ. ಫಲಾನುಭವಿಗಳ ಆಯ್ಕೆಯ ಪಟ್ಟಿ ತಯಾರು ಮಾಡುವುದಕ್ಕೆ ಇನ್ನೊಂದು ತಿಂಗಳ ಕಾಲಾವಧಿ ಹೆಚ್ಚಿಗೆ ಕೊಡಬೇಕು.

ಒಬ್ಬ ಮಾನ್ಯ ಸದಸ್ಯರು : ಚಿಕ್ಕಮಗಳೂರು ಕ್ಷೇತ್ರದಲ್ಲಿ ಆರು ವಿಧಾನ ಸಭಾ ಕ್ಷೇತ್ರಗಳಿವೆ, ಏಳು ತಾಲ್ಲೂಕುಗಳಿವೆ, ಏಳು ತಾಲ್ಲೂಕುಗಳಿಂದ 3,000 ಚಿಲ್ಲರೆ ಆಶ್ರಯ ಮನೆಗಳನ್ನು ಕೊಟ್ಟಿದ್ದಾರೆ. 3000ದಲ್ಲಿ ಒಂದೂವರೆ ಸಾವಿರ ಮನೆಗಳು ಶೃಂಗೇರಿ ಕ್ಷೇತ್ರಕ್ಕೆ ಹೋಗುತ್ತವೆ. ಅಲ್ಲಿ ಒಂದು ಲಕ್ಷ 20,000 ಮತದಾರರಿದ್ದಾರೆ. ಪ್ರತಿಯೊಂದು ಕ್ಷೇತ್ರದಲ್ಲಿ ಒಂದು ಲಕ್ಷದ 40,000 ಮತದಾರರಿದ್ದಾರೆ. ಆ ದೃಷ್ಟಿಯಿಂದ ಮತದಾರರ ಪರಿಗಣನೆಗೆ ತೆಗೆದುಕೊಂಡು ಮಾಡಬೇಕು. ಜಿಲ್ಲಾ ಸಚಿವರಾದ ಸಗೀರ್ ಅಹಮದ್‌ರವರಿಗೆ ಎಲ್ಲ ಶಾಸಕರೂ ಸಹ ಒಂದು ವರ್ಷದಿಂದ ಇದನ್ನು ಮಾರ್ಪಾಡು ಮಾಡಿ ಕೊಡಿ ಎಂದು ಹೇಳುತ್ತಿದ್ದೇವೆ. ಶೃಂಗೇರಿ ತಾಲ್ಲೂಕಿನಲ್ಲಿ ಎರಡು ವರ್ಷಗಳಿಂದ ಕೊಟ್ಟಂತಹ ಮನೆಗಳನ್ನು ಯುಟಿಲೈಸ್ ಮಾಡುತ್ತಿಲ್ಲ. ಕೇವಲ ಅಂಬೇಡ್ಕರ್ ಮನೆಗಳು, ಆಶ್ರಯ ಮನೆಗಳು ಸಹ ಕಾಲು ಭಾಗ. ಒಂದೂವರೆ ಸಾವಿರ ಮನೆಗಳಲ್ಲಿ 300 ಮನೆಗಳು ಮಾತ್ರ ಯುಟಿಲೈಸ್ ಆಗುತ್ತವೆ. ಇನ್ನು 1200 ಮನೆಗಳು ಹಾಗೆ ಉಳಿಯುತ್ತಿವೆ. ಆದುದರಿಂದ ದಯವಿಟ್ಟು ಕ್ಷೇತ್ರವಾರು ಕೊಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಖಮರುಲ್ ಇಸ್ಲಾಂ : ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. 1998-99ರ ಪಾಪ್ಯುಲೇಷನ್ ಮತ್ತು ಡಿಮಾಂಡ್ ಎರಡೂ ಗಮನದಲ್ಲಿಟ್ಟುಕೊಂಡು ಟಾರ್ಗೆಟ್ ಫಿಕ್ಸ್ ಮಾಡಲಾಗಿತ್ತು. ಈ ಸಲ ನಮ್ಮ ಸರ್ಕಾರದಿಂದ ಪಾಪ್ಯುಲೇಷನ್ ಬೇಸಿಸ್ ಮೇಲೆ ಮಾಡಿದ್ದೇವೆ. ಅದು ಡಿಮಾಂಡ್ ಪ್ರಕಾರ ಇಲ್ಲ.

ಅಧ್ಯಕ್ಷರು : ಒಟ್ಟು ಸಾರಾಂಶ ಪಾಪ್ಯುಲೇಷನ್ ಪ್ರಕಾರ ಮಾಡಿರುವುದರಲ್ಲಿ ವ್ಯತ್ಯಾಸವಿದೆ, ಅದನ್ನು ಸರಿಪಡಿಸಿ ಎಂದು ಹೇಳುತ್ತಿದ್ದಾರೆ. ಇವತ್ತು ಜಿಲ್ಲಾವಾರು ಸದಸ್ಯರ ಮೀಟಿಂಗ್ ಕರೆದಿದ್ದೀರಿ, ಜಿಲ್ಲಾವಾರು ಏನೇನು ವ್ಯತ್ಯಾಸ ಇದೆ ಅದನ್ನು ಸರಿಪಡಿಸಿ.

SRI QAMARUL ISLAM : I will do it on the basis of the population. If there is anything, you can tell us. I will call a meeting of the MLAs during the legislature session period.

ಅಧ್ಯಕ್ಷರು : 9, 10, 11 ಮತ್ತೆ ಪುನಃ 13, 14, 15 ರಂದು ಎಲ್ಲ ಶಾಸನಸಭಾ ಸದಸ್ಯರಿಗೂ ಅವರ ಕಛೇರಿಯಲ್ಲಿ ಸಭೆ ಕರೆದಿದ್ದಾರೆ, ಏನಾದರೂ ಅನಾಮಲೀಸ್ ಇದ್ದರೆ ಕುಳಿತು ಸರಿಪಡಿಸಬಹುದು ಎಂದು ಹೇಳಿದ್ದಾರೆ. ಅದನ್ನು ಸರಿಪಡಿಸಿ.